

ಹೆಕ್ಸ್ವಮ್ ಪ್ರಾಂತ್ಯದಲ್ಲಿ ಮುಂದಿನ ಚಳಿಗಾಲಕ್ಕೆ ನೆಲ-ನೆಲೆ ಕಾಣಲಿದೆ; ಹೋಲಿ ನ್ಯೂಟನ್ ಎನ್ನುವ ಮಹಿಳೆಯ ಸಮಾಧಿಯ ಬಳಿ. ಹದಿನೈದು ವರ್ಷದವಳಿದ್ದಾಗ ಸಂಬಂಧ ಕೊನೆಗೊಂಡದ್ದನ್ನು ಒಪ್ಪಲಾಗದ ಮಾಜಿ ಪ್ರಿಯಕರ ಆಕೆಯನ್ನು ಕೊಲೆ ಮಾಡಿದ್ದ. ಕೊಲೆಯಾದ ಮಗಳ ನೆನಪಿನಲ್ಲಿ ಬದುಕುತ್ತಿರುವ ಆಕೆಯ ಹೆತ್ತವರು, ತಾವು ಪಡೆಯಲಿರುವ ಸಿಕಮೋರ್ ಸಸಿ ಅಳಿದ ಮಗಳನ್ನು ಸ್ಮರಿಸುವ ಹೊಸ ದಾರಿಯಾಗಿದೆ ಎಂದು ಖುಷಿಪಡುತ್ತಿದ್ದಾರೆ. ಇನ್ನುಳಿದ ನಲವತ್ತೆಂಟು ಸಸಿಗಳೂ ಯು.ಕೆ.ಯ ಬೇರೆ ಬೇರೆ ಭಾಗಗಳನ್ನು ಸೇರಿ ಅಲ್ಲಲ್ಲ, ನಾಶವಾದ ಮರದ ಕಥೆಯನ್ನು ಹೇಳಲಿವೆ, ನೆನಪನ್ನು ಹಸಿರಾಗಿಡಲಿವೆ.

ಒಂದು ಸಣ್ಣ, ಸಹಜ, ಸುಂದರ ಖುಷಿಯನ್ನು ನಿರಂತರವಾಗಿ ನೂರೈವತ್ತು ವರ್ಷಗಳ ಕಾಲ ಹಂಚಿದ, ಪ್ರಾಕೃತಿಕ ದೃಶ್ಯಕಾವ್ಯದಲ್ಲಿ ಭೂಮಿ ಆಕಾಶದಷ್ಟೇ ಚಿರಂತನ ಎನಿಸಿದ ಮರ, ಕ್ಷುಲ್ಲಕ ಕಿಡಿಗೇಡಿತನದ ಪರಿಣಾಮವಾಗಿ ಇಲ್ಲದಾದಾಗ, ನಿತ್ಯವೂ ನಮ್ಮನ್ನು ಕಾಯುವ ಬದುಕಿನ ಭರವಸೆಯೇ ಕರಗಿ ಹೋಗುವ ಸಾಧ್ಯತೆ ಇದೆ. ಆದರೆ, ಅಂತಹ ವಿಷಣ್ಣ ಸಾಧ್ಯತೆಯನ್ನು ಎದುರಿಸುವ, ಚೇತೋಹಾರಿ ಉತ್ಸಾಹವನ್ನು ಮತ್ತೆ ನಮ್ಮ ಒಳಹೊರಗೆ ತುಂಬಿಸುವ ಹೋರಾಟವನ್ನು ನಲವತ್ತೊಂಬತ್ತು ಸಸಿಗಳು ಆಗಲೇ ಆರಂಭಿಸಿವೆ. ಇನ್ನು ಈಶಾನ್ಯ ಇಂಗ್ಲೆಂಡಿನ ಹ್ಯಾಡ್ರಿಯನ್ ಗೋಡೆಯ ಪಕ್ಕದ ಕಡಿದ ಬುಡದಲ್ಲೂ ಚಿಗುರೆಲೆಗಳು ಮೊಳೆತು 'ಹೊಸತು ಜನ್ಮ'ದ ಸೂಚನೆ ಕಾಣುತ್ತಿದೆ. ಒಂದು ವೇಳೆ ಆ ಮೊಳಕೆಗಳು, ಚಿಗುರೆಲೆಗಳು ಬೆಳೆಯುತ್ತಲೇ ಹೋದರೆ, ಮುಂದಿನ ನೂರೈವತ್ತು ಇನ್ನೂರು ವರ್ಷಗಲ್ಲಿ, ಎರಡು ವರ್ಷದ ಹಿಂದೆ ಬಿದ್ದ ಮರದಷ್ಟೇ ದೊಡ್ಡ ಮರವೊಂದು ಆಕಾರ ತಳೆಯಬಹುದು ಎಂದು ವೃಕ್ಷಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಬರಡು ಬುಡವನ್ನೋ ಎಳೆಯ ಚಿಗುರನ್ನೋ ಅಥವಾ ಮುಂದೆಂದೋ ಅಲ್ಲೊಂದು ಮರ ಎದ್ದು ನಿಲ್ಲುವುದನ್ನೋ ಕನವರಿಸುತ್ತ ಆ ಸ್ಥಳಕ್ಕೆ ಬರುತ್ತಿರುವವರಿಗೆ 'ಗೌರವದಿಂದ ನಡೆದುಕೊಳ್ಳಿ' ಎನ್ನುವ ಎಚ್ಚರಿಕೆಯ ಫಲಕ ಅಲ್ಲೇ ತೂಗುಹಾಕಲಾಗಿದೆ. ಬಂದು ಮರಳುವವರಿಗೂ ಮರಳಿ ಬರುವವರಿಗೂ ನಾಳಿನ ಭರವಸೆ ಜೀವಂತವಾಗಿದೆ. ●